ದಿನಾಂಕಃ **03-08-2024** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣವಚನ ಬೋಧಿಸಲಾಯಿತು.

**<u>ಪಾಟೀ ಸವಾಲು ಃ ವಾದಿ ಪರ ವಕೀಲರಾದ ಶ್ರೀ ಕೆ.ಎಂ.ಎಸ್.ರವರಿಂದ ಃ</u>**

**1.** ನಾನು ಪದವಿದರ. ವೃತ್ತಿಯಲ್ಲಿ ವ್ಯವಸಾಯಗಾರ. 35 ವರ್ಷಗಳ ಹಿಂದೆ ಕೆನ್ನಾಳು ಗ್ರಾಮ ಪಂಚಾಯಿತಿಯ ಪ್ರದಾನನಾಗಿದ್ದೆ. ಪ್ರತಿವಾದಿ 2 ಮತ್ತು 4 ರವರು ನನ್ನ ಸಂಬಂದಿಕರಲ್ಲ. ನಮ್ಮ ನಡುವೆ ಯಾವುದೇ ವ್ಯವಹಾರವಿಲ್ಲ. ದಿಃ10.03.1953 ರ ಬೋರಮ್ಮರವರ ಕ್ರಯ ಪತ್ರವನ್ನು ಓದಿ ತಿಳಿದುಕೊಂಡಿದ್ದೇನೆ. ಸದರಿ ಕ್ರಯ ಪತ್ರ 2 ನೇ ಪ್ರತಿವಾದಿಯ ವಶದಲ್ಲಿರಬಹುದು. ಬೋರಮ್ಮನವರು ತಮ್ಮ ತಮ್ಮನಿಗೆ ಮತ್ತೆ ಮಾರಾಟ ಅಥವಾ ದಾನ ಮಾಡಿರುವ ವ್ಯವಹಾರದ ಬಗ್ಗೆ ನನಗೆ ತಿಳಿಯಿತು. ಬೋರಮ್ಮ ತಾನು ಯಾರಿಂದ ಖರೀದಿಸಿದರು ಸದರಿ ಮಾಲಿಕರಿಗೆ ಸ್ವತ್ತನ್ನು ವಾಪಸ್ಸು ನೀಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. 1953 ರ ಕ್ರಯ ಪತ್ರವು ಸರ್ವೇ ನಂಬರ್ ಸ್ವತ್ತಿಗೆ ಆಗಿತ್ತು. ಬೋರಮ್ಮನ ಹೆಸರಿಗೆ ಪಂಚಾಯಿತಿಯಲ್ಲಿ ಖಾತೆಯಾಗಿದೆ. ದುರಸ್ತಿಯಾಗಿರುವ ಬಗ್ಗೆ ನನಗೆ ಗೊತ್ತಿಲ್ಲ. ಬೋರಮ್ಮನವರು ತನ್ನ ಸ್ವತ್ತಿಗೆ ಹದ್ದು ಬಸ್ತು ಮಾಡಿಕೊಂಡಿರುವ ಬಗ್ಗೆ ಸರ್ವೇ ಇಲಾಖೆಯವರು ಗಡಿ ಗುರುತಿಸಿ ಕಲ್ಲನ್ನು ಹಾಕಿದ್ದರು. ಬೋರಮ್ಮನವರ ಸ್ವತ್ತಿಗೆ ಗಡಿ ಕಲ್ಲು ಹಾಕಿರುವ ಬಗ್ಗೆ ನನ್ನದೇನು ತಕರಾರು ಇಲ್ಲ. ಬೋರಮ್ಮನ ಸ್ವತ್ತಿನ ದಕ್ಷಿಣಕ್ಕೆ ನನ್ನ ಸ್ವತ್ತು ಇದೆ. ಬೋರಮ್ಮನ ಸ್ವತ್ತು ಮತ್ತು ನಮ್ಮ ಸ್ವತ್ತು ಒಂದೇ ಸಮನಾಂತರವಾಗಿದೆ. ನನ್ನ ಸ್ವತ್ತಿನ ಉತ್ತರಕ್ಕಿರುವ ಸ್ವತ್ತುಗಳು ಗ್ರಾಮ ಠಾಣ ಸ್ವತ್ತುಗಳು ಎಂದರೆ ಸರಿ. ಸದರಿ ಸ್ವತ್ತುಗಳು ಕೆನ್ನಾಳು ಗ್ರಾಮ ಪಂಚಾಯಿತಿಗೆ ಒಳಪಟ್ಟಿವೆ.

**2.** ಬೋರಮ್ಮ 2 ನೇ ಪ್ರತಿವಾದಿಯ ಸೋದರತ್ತೆ. 3 ನೇ ಪ್ರತಿವಾದಿ ಬೋರಮ್ಮನ ಮೊಮ್ಮಗ. 2 ಮತ್ತು 3 ನೇ ಪ್ರತಿವಾದಿಯವರು ಅನ್ಯೂನ್ಯವಾಗಿದ್ದಾರೊ ಇಲ್ಲವೊ ನನಗೆ ಗೊತ್ತಿಲ್ಲ. ಬೋರಮ್ಮನ 3 ಗುಂಟೆ ಸ್ವತ್ತು ಯಾರಿಗೆ ಎಷ್ಟೆಷ್ಟು ಹೋಗಿದೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನ ಪೂರ್ವದ ವಿ.ಸಿ. ನಾಲೆಯಿಂದ ಪಶ್ಚಿಮದ ರಸ್ತೆಯವರೆಗೂ 2 ನೇ ಪ್ರತಿವಾದಿಯ ಸ್ವತ್ತು ಇದೆ. ಅದರ ಅಳತೆ ನನಗೆ ಗೊತ್ತಿಲ್ಲ. ಬೋರಮ್ಮನ 3 ಗುಂಟೆ ಸ್ವತ್ತು 2 ನೇ ಪ್ರತಿವಾದಿಗೆ ಬಂದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಬೋರಮ್ಮನ ಸ್ವತ್ತು ಬೋರಮ್ಮನ ತಮ್ಮ ಸಿದ್ದೇಗೌಡ

ಮತ್ತು ಮಗಳು ಶಾಂತಮ್ಮನಿಗೆ ಹೋಗಿದೆ ಎಂದರೆ ಅವರು ಸ್ವಾದೀನದಲ್ಲಿದ್ದ ಬಗ್ಗೆ ಗೊತ್ತು. ಯಾವ ರೀತಿ ಹಂಚಿಕೊಂಡಿದ್ದಾರೆ ನನಗೆ ಗೊತ್ತಿಲ್ಲ. ಬೋರಮ್ಮನ ಸ್ವತ್ತನ್ನು ಶಾಂತಮ್ಮನಿಗೆ ದಾನದ ಮೂಲಕ ಮತ್ತು ಸಿದ್ದೇಗೌಡನಿಗೆ ಕ್ರಯ ಪತ್ರದ ಮೂಲಕ ಕೊಡಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ಬೋರಮ್ಮನ ಸ್ವತ್ತು ಪೂಡಿ ದುರಸ್ತಿಯಾಗಿದೆಯೋ ಇಲ್ಲವೊ ನನಗೆ ಗೊತ್ತಿಲ್ಲ. ಬೋರಮ್ಮನ 3 ಗುಂಟೆ ಸ್ವತ್ತಿನ ಪಶ್ಚಿಮಕ್ಕೆ ಪಂಚಾಯಿತಿ ರಸ್ತೆ ಇದೆ ಎಂದರೆ ಸರಿ. ಬೋರಮ್ಮನ ಸ್ವತ್ತು ಪಂಚಯಿತಿ ರಸ್ತೆಯವರೆಗೂ ಹೆಚ್ಚಿನ ವಿಸ್ತೀರ್ಣದಲ್ಲಿದೆ ಎಂದರೆ ಸರಿಯಲ್ಲ. ಸಾಕ್ಷಿಯು ರಸ್ತೆ ಮಾರ್ಜಿನ್ ನಲ್ಲೆ ಎಲ್ಲರ ಸ್ವತ್ತು ಬರುತ್ತದೆ ಎಂದು ನುಡಿಯುತ್ತಾರೆ. ದಾವಾ ಸರ್ವೆ ನಂಃ131 ರಲ್ಲಿ ವಿ.ಸಿ.ನಾಲಾ ರಸ್ತೆ ಇದೆ ಎಂದರೆ ನನಗೆ ಗೊತ್ತಿಲ್ಲ.

**3.** ನಿಡಿ-4 ನನ್ನ ದೊಡ್ಡಪ್ಪನಿಗೆ ಸೇರಿದ ಸ್ವತ್ತು. ನಂತರ ನಾನು 1976 ರಲ್ಲಿ ಅದನ್ನೆ ಕ್ರಯಕ್ಕೆ ಪಡೆದಿದ್ದೆ. ನಿಡಿ-4 ರಲ್ಲಿ ಸರ್ವೆ ನಂಃ131/3 ರ ವಿಸ್ತೀರ್ಣ 12 ಗುಂಟೆ ಆಕಾರ 38 ನಾಯಾ ಪೈಸೆಯುಳ್ಳ ಜಮೀನಿನಲ್ಲಿ ವಿ.ಸಿ.ಬ್ರಾಂಚ್ ನಾಲಾಕ್ಕೆ ಸೇರಿ ಇರುವುದು 2 ಗುಂಟೆ ಜಾತಾ ಉಳಿದ 10 ಗುಂಟೆ ಜಮೀನು ಮೆಲ್ಕಂಡ ಕ್ರಯ ಪತ್ರಕ್ಕೆ ಒಳಪಟ್ಟಿರುತ್ತದೆ ಎಂದು ನಮೂದಿದೆ. ಸರ್ವೆ ನಂಃ131/3 ರ ಒಟ್ಟು ವಿಸ್ತೀರ್ಣ 12 ಗುಂಟೆ ಎಂದರೆ ಸರಿ. Index of Lands ನಲ್ಲಿ ಅದರ ನಮೂದು ಇದೆ ಎಂದರೆ ಸರಿ. **ಸದರಿ ದಾಖಲೆಯನ್ನು ನಿಪಿ-41 ಎಂದು ಗುರುತಿಸಲಾಯಿತು.** ಸರ್ವೆ ನಂಃ131/3 ರಲ್ಲಿ ಮಾರಾಟಗಾರರಾದ ದೇವರಾಜೇಗೌಡರು ಸ್ವತ್ತನ್ನು ಉಳಿಸಿಕೊಂಡಿರುವ ಬಗ್ಗೆ ನನಗೆ ಗೊತ್ತಿಲ್ಲ. ವಿ.ಸಿ.ನಾಲಾ ಜಾತಾ ಸರ್ವೆ ನಂಃ131/3 ರ ಪೂರ್ವಕ್ಕೆ ಇದೆ ಎಂದರೆ ಸರಿ.

**4.** ನಿಡಿ-5 ರ ಕ್ರಯಪತ್ರದಲ್ಲಿ ದೇವರಾಜೇಗೌಡರು ತಮಗೆ ಸೇರಿದ 2 ಗುಂಟೆ ಸ್ವತ್ತು ಎಂದು ನಮೂದಿಸಿದ್ದಾರೊ ಇಲ್ಲವೊ ನನಗೆ ಗೊತ್ತಿಲ್ಲ. ಸರ್ವೆ ನಂಃ131/3 ಮತ್ತು ಸರ್ವೆ ನಂಃ131/5 ರ ಮದ್ಯೆ ವಿ.ಸಿ. ನಾಲಾ ಬ್ರಾಂಚ್ ಇದೆ. ನಿಡಿ-4 ರಲ್ಲಿ ಜಮೀನಿನ ಚಕ್ಕುಬಂದಿ ಪೂಃನಂಜೇಗೌಡರ ಮಗ ನಂಜೇಗೌಡರ ಜಮೀನು ಅಲ್ಲ ಬೆಂಕಾಳೆಗೌಡರ ಮಗ ಶಿವಣ್ಣನ ಜಮೀನು ಎಂದು ನಮೂದಿಸಿದ್ದು, ನಂಜೇಗೌಡರ ಮಗನೇ ವಾದಿ ಎಂದರೆ ಸರಿ. ಬಂಕಾಳೆಗೌಡರ ಮಗ ಶಿವಣ್ಣರವರ ವಠಾರ ಗೊತ್ತು. ನಿಡಿ-4 ರಲ್ಲಿ ಜಮೀನಿನ ಚಕ್ಕುಬಂದಿ

<u>ಪೂಃನಂಜೇಗೌಡರ ಮಗ ನಂಜೇಗೌಡರ ಜಮೀನು ಅಲ್ಲ</u> ಬೆಂಕಾಳೆಗೌಡರ ಮಗ ಶಿವಣ್ಣನ ಜಮೀನು ಎಂದು ನಮೂದಿಸಿಲ್ಲ ಅದು ನಂಜೇಗೌಡರ ಮಗ ನಂಜೇಗೌಡರ ಜಮೀನು <u>ಅಲ್ಲಾಂ ಬೆಂಕಾಳೇಗೌಡರ ಮಗ ಶಿವಣ್ಣನ ಜಮೀನು</u> ಎಂದು ನಮೂದಿಸಿದೆ ಎಂದರೆ ಸರಿಯಲ್ಲ. ನಿಡಿ-4ರ ದೃಢೀಕೃತ ನಕಲಿನ ಪ್ರತಿಯನ್ನು ಸಾಕ್ಷಿಗೆ ಓದಿ ಹೇಳಲಾಗಿ ಪೂರ್ವಕ್ಕೆಃನಂಜೇಗೌಡರ ಮಗ ನಂಜೇಗೌಡರ ಜಮೀನು ಅಲ್ಲ ಅದರ ಮೇಲೆ (f) ಎಂದು ನಮೂದಿಸಿ ದಾಖಲೆಯ ಕೆಳಗಿನ ಸಾಲಿನಲ್ಲಿ (f) ಮುಂಭಾಗದಲ್ಲಿ ಅಸ್ಪಷ್ಟ ಮತ್ತು ಅಸಲಿನಂತೆ ನಕಲಿನಲ್ಲಿ ಎಂದು ನಮೂದಿಸಿದ್ದಾರೆ ಎಂದರೆ ಸರಿ. ಬೆಂಕಾಳೇಗೌಡರ ಮಗ ಶಿವಣ್ಣನವರ ವಠಾರವನ್ನು ಅಲ್ಲಾಂ ಬೆಂಕಾಳೇಗೌಡರ ವಠಾರ ಎಂದು ಕರೆಯುತ್ತಾರೆ ಎಂದರೆ ಸರಿಯಲ್ಲ.

**5**. ದೇವರಾಜೇಗೌಡ ಕೇವಲ 10 ಗುಂಟೆಗೆ ಕ್ರಯ ಪತ್ರ ಮಾಡಿದ್ದು 2 ಗುಂಟೆ ಸ್ವತ್ತಿಗೆ ಮತ್ತೊಂದು ಪತ್ರವನ್ನು ಸೃಷ್ಠಿಸಲಾಗಿದೆ ಎಂದರೆ ಸರಿಯಲ್ಲ. ಸರ್ವೇ ನಂಃ131/3 ಪೂರ್ವಕ್ಕೆ ಲಗತ್ತಾಗಿ ವಿ.ಸಿ. ನಾಲಾ ಬ್ರಾಂಚ್ ಇಲ್ಲ ಎಂದರೆ ಸರಿಯಲ್ಲ. ನಿಡಿ-6 ನನಗೆ ಕೆಂಪೇಗೌಡರು ಬರೆದುಕೊಟ್ಟ ಪತ್ರವಾಗಿದೆ. ನಿಡಿ-6ರ ಚಕ್ಕುಬಂದಿ ಪೂಃಮರಿಗೌಡ ಮತ್ತು ನಂಜೇಗೌಡ ಇವರುಗಳ ಜಮೀನು ಎಂದು ನಮೂದು ಇದೆ ಎಂದರೆ ಸರಿ. ಬೋರಮ್ಮನ ಜಮೀನು ಮತ್ತು ನಮ್ಮ ಜಮೀನಿನ ಮದ್ಯದಲ್ಲಿ ವಿ.ಸಿ. ನಾಲಾ ಬ್ರಾಂಚ್ ಇದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಬೋರಮ್ಮನ ಜಮೀನಿನ ಪತ್ರವನ್ನು ನಾನು ಓದಿ ತಿಳಿದುಕೊಂಡಿಲ್ಲ ಎಂದರೆ ಸರಿಯಲ್ಲ. ಬೋರಮ್ಮನ ಪತ್ರದಲ್ಲಿ ಸರ್ವೇ ನಂಃ131/3ರಲ್ಲಿ ಪೈಕಿ 3 ಗುಂಟೆ ಎಂದು ನಮೂದಿದೆ ಎಂದರೆ ಸರಿಯಲ್ಲ. ಸಾಕ್ಷಿಯು ಸುಮಾರು 3 ಗುಂಟೆ ಎಂದು ಅಂದಾಜಿಸಲಾಗಿದೆ ಎಂದು ನುಡಿಯುತ್ತಾರೆ.

**6.** ನನ್ನ ಸ್ವತ್ತಿನ ಉತ್ತರಕ್ಕೆ ಶಂಕರ, ಗುರುಮೂರ್ತಿ ಮತ್ತು ಹೊಂಬೇಗೌಡರ ಸೊಸೆ ಲೇಟ್ ನಾಗಮ್ಮರವರ ಸ್ವತ್ತುಗಳಿವೆ. ವಾದಿಯ ತಂದೆ ನಂಜೇಗೌಡರು ನಾಗಮ್ಮನ ಮಾವ ಹೊಂಬೇಗೌಡರಿಗೆ ಸುಮಾರು 75 ವರ್ಷಗಳ ಹಿಂದೆ ಸ್ವತ್ತನ್ನು ಮಾರಾಟ ಮಾಡಿದ್ದರು ಎಂಬ ಬಗ್ಗೆ ನನಗೆ ಮಾಹಿತಿ ಇದೆ. ನಾಗಮ್ಮನ ಸ್ವತ್ತಿನ ಹದ್ದು ಬಸ್ತು ಮತ್ತು ದುರಸ್ತಿಯಾದ ಬಗ್ಗೆ ನನಗೆ ಗೊತ್ತಿಲ್ಲ. ಹೊಂಬೇಗೌಡರ ಸ್ವತ್ತು ಅನ್ಯಕ್ರಾಂತವಾದ ಬಗ್ಗೆ ನನಗೆ ಗೊತ್ತಿಲ್ಲ. ನಾನು, 2ನೇ

ಪ್ರತಿವಾದಿ ಮತ್ತು 4 ನೇ ಪ್ರತಿವಾದಿ ಒಟ್ಟಾಗಿ ಒಬ್ಬರೆ ವಕೀಲರನ್ನು ನೇಮಿಸಿ ತಕರಾರನ್ನು ಸಲ್ಲಿಸಿಕೊಂಡಿದ್ದೇವೆ.

**7**. ನಾಗಮ್ಮನ ಮಾವನ ಕ್ರಯ ಪತ್ರದಲ್ಲಿ ಚಕ್ಕುಬಂದಿಯಲ್ಲಿ ಪೂರ್ವಕ್ಕೆ ವಿ.ಸಿ. ನಾಲಾ ಬ್ರಾಂಚ್ ನಮೂದಿಲ್ಲ ಎಂದರೆ ಸರಿಯಲ್ಲ. ಸಕ್ಷಿಯು ನಾಗಮ್ಮನವರ ಮೂಲ ಪತ್ರ ಅವರ ಬಳಿಯೇ ಇರಬಹುದು. ನಾಗಮ್ಮನ ಬಾವನವರ ಕ್ರಯ ಪತ್ರವನ್ನು ನಾನು ಓದಿ ತಿಳಿದುಕೊಂಡೆ ಅಷ್ಟೆ. ಹೊಂಬೇಗೌಡರ ಸ್ವತ್ತಿನ ವಿಸ್ತೀರ್ಣ ನನಗೆ ಗೊತ್ತಿಲ್ಲ. ಹೊಂಬೇಗೌಡರು ಅನ್ಯಕ್ರಾಂತ ಮಾಡಿಸಿಕೊಂಡು ವಾಸದ ಮನೆ ಕಟ್ಟಿಸಿಕೊಂಡಿದ್ದಾರೆ ಎಂದರೆ ಸಾಕ್ಷಿಯು ಅನ್ಯಕ್ರಾಂತವಾಗಿರುವ ಬಗ್ಗೆ ನನಗೆ ಗೊತ್ತಿಲ್ಲ. ಮನೆ ಕಟ್ಟಿಕೊಂಡು ಇದ್ದಾರೆ ಎಂದು ನುಡಿಯುತ್ತಾರೆ. ನಂಜೇಗೌಡರಿಂದ ಹೊಂಬೇಗೌಡರಿಗೆ ಆತ ಜಮೀನಿನ ಕಂದಾಯ ದಾಖಲೆಗಳನ್ನು ನಾನು ನೋಡಿಲ್ಲ. ಹೊಂಬೇಗೌಡರ ಸ್ವತ್ತು ದುರಸ್ತಿಯಾಗಿ ಸರ್ವೇ ನಂಃ131/5(ಎ-2) ಎಂದು ಪೋಡಿಯಾಗಿದೆ ಎಂದರೆ ನನಗೆ ಗೊತ್ತಿಲ್ಲ. ಸರ್ವೇ ನಂಃ131/5(ಎ-4) ದುರಸ್ತಿಯಾಗಿ ವಾದಿಯ ಹೆಸರಿಗೆ ಖಾತೆಯಾಗಿದೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರವಂತೆ a b c d e f g I j k m a sketch ನ ಒಳಗೆ ವಾದಿಯ ಸ್ವತ್ತಾಗಲಿ ಅನುಭವವಾಗಲಿ ಇರುವುದಿಲ್ಲ ಮತ್ತು ಕೆ.ಎನ್. ಗುರುಮೂರ್ತಿ ಸಹ ಅದೇ ಸರ್ವೇ ನಂಬರ್ ನಲ್ಲಿ ಉತ್ತರ ಭಾಗದಲ್ಲಿ ಸ್ವಾದೀನದಲ್ಲಿ ಇದ್ದಾರೆ ಎಂಬುದು ಸರಿಯಲ್ಲ ಎಂದು ಹೇಳಿರುವುದು ಕ್ರಮಬದ್ಧವಾಗಿದೆ.

**ಈ ಹಂತದಲ್ಲಿ ನ್ಯಾಯಾಲಯದ ಕಲಾಪದ ಅವದಿ ಮುಗಿದ ಕಾರಣ ಮುಂದುವರೆದ ಪಾಟೀ ಸವಾಲಿಗಾಗಿ ಮುಂದೂಡಲಾಯಿತು.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

**ಓ. ಹೇ. ಕೇ. ಸ. ಇದೆ.**

**ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,**
**ಸಾಕ್ಷಿದಾರರ ಸಹಿ.** **ಪಾಂಡವಪುರ.**